**OS.No.**15/2025
**ಪಿ ಡಬ್ಲ್ಯೂಃ 1**

**ದಿಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಸಿ ಎಂ ಟಿ   ವಕೀಲರಿಂದ**

ನಾನು 10 ನೇ ತರಗತಿ ಓದಿರುತ್ತೇನೆ. ನಾನು ಕ್ಯಾಟರಿಂಗ್ ಕೆಲಸ ಮಾಡುತ್ತಿದ್ದೇನೆ. ನಾನು ಮೊದಲು ಶಿವಮೊಗ್ಗದ ವಿನೋಬನಗರದಲ್ಲಿ ಇದ್ದು ಈಗ ಕಳೆದ 2 ವರ್ಷಗಳಿಂದ ವಿದ್ಯಾನಗರದಲ್ಲಿ ವಾಸವಿರುತ್ತೇನೆ. ನನ್ನ ತಾಯಿ ಈಗಲೂ ವಿನೋಬನಗರದಲ್ಲಿ ವಾಸವಿರುತ್ತಾರೆ. ನನ್ನ ತಾಯಿಯ ಜೊತೆ ನನ್ನ ತಂದೆ ಇರುತ್ತಾರೆ. ನನ್ನ ತಂದೆ ಮೊದಲು ಕುಕ್ಕವಾಡದ ಸಕ್ಕರೆ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿಗೆ 3 ವರ್ಷಗಳಿಂದ ಆರೋಗ್ಯದಲ್ಲಿ ಜರ್ಜರಿತ ಉಂಟಾಗಿರುತ್ತದೆ. ನನ್ನ ತಾಯಿಗೆ ಓಡಾಡಲು ಆಗುವುದಿಲ್ಲ ಮತ್ತು ನರ ದೌರ್ಬಲ್ಯ ಇರುತ್ತದೆ. ಮೊದಲು ಸಹ ನನ್ನ ತಾಯಿಗೆ ನರ ದೌರ್ಬಲ್ಯ ಇದ್ದು ಈಗ 3 ವರ್ಷಗಳಿಂದ ನರ ದೌರ್ಬಲ್ಯ ಹೆಚ್ಚಿಗೆ ಆಗಿರುತ್ತದೆ. ಮೊದಲು ನನ್ನ ತಾಯಿಗೆ ದೇವೆಂದ್ರಪ್ಪ ಎನ್ನುವ ವೈದ್ಯರ ಬಳಿ ಚಿಕಿತ್ಸೆ ಕೊಡಿಸುತ್ತಿದ್ದೆವು. ಈಗ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದೇವೆ. ನನ್ನ ತಾಯಿಗೆ ನಾವು ಒಟ್ಟು ಮೂರು ಜನ ಮಕ್ಕಳು ಇರುತ್ತೇವೆ. ಶ್ರೀನಿವಾಸ ಎನ್ನುವವರು ನನ್ನ ಅಣ್ಣ ಇರುತ್ತಾರೆ. ಶ್ರೀನಿವಾಸರವರು 6 ನೇ ಪ್ರತಿವಾದಿಯ ಮಗಳನ್ನು ಮದುವೆ ಮಾಡಿಕೊಂಡಿರುತ್ತಾರೆ. ಈಗ ನನ್ನ ಅಣ್ಣ ಮರಣ ಹೊಂದಿರುತ್ತಾರೆ. ನನ್ನ ಅಣ್ಣ ಶ್ರೀನಿವಾಸನಿಗೆ ಮಕ್ಕಳು ಇಲ್ಲ ಎಂದರೆ ಸರಿ. ಶ್ರೀನಿವಾಸರವರು ಮರಣ ಹೊಂದಿದಾಗ ಶವಸಂಸ್ಕಾರವನ್ನು ನಮ್ಮ ಊರಾದ ಹಿರೆಕೋಗಲೂರು ಗ್ರಾಮದಲ್ಲಿ ಜರುಗಿಸಿರುತ್ತೇವೆ. ನನ್ನ ತಾಯಿ ಶವಸಂಸ್ಕಾರಕ್ಕೆ ಬಂದಿರಲಿಲ್ಲ. ಅವರ ಅನಾರೋಗ್ಯದಿಂದ ಶವಸಂಸ್ಕಾರಕ್ಕೆ ಬಂದಿರಲಿಲ್ಲ ಎಂದರೆ ಸರಿ. ನನ್ನ ತಾಯಿಗೆ ಮಂಜುಳ ಎನ್ನುವ ಮಗಳು ಇದ್ದು ಅವರು ಈಗ 3 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ಸೋದರಮಾವ ವೀರಭದ್ರಪ್ಪರವರು ದಿನಾಂಕ 06.03.2023 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಅನಾರೋಗ್ಯ ಇರುವ ಕಾರಣ ವೀರಭದ್ರಪ್ಪರವರ ಶವಸಂಸ್ಕಾರಕ್ಕೆ ಬಂದಿರಲಿಲ್ಲ ಎಂದರೆ ಸರಿ. ನನ್ನ ಅಕ್ಕ ಮಂಜುಳನಿಗೆ ಇಬ್ಬರು ಮಕ್ಕಳು ಇದ್ದು ಅವರ ಮದುವೆಯಾಗಿರುತ್ತದೆ. ದಿನಾಂಕ 11.06.2023 ಮಂಜುಳನ ಮಗ ರಕ್ಷಿತ್ ರವರ ಮದುವೆ ಆಯಿತು ಎಂದರೆ ಸರಿ. ನನ್ನ ತಾಯಿಗೆ ಅನಾರೋಗ್ಯ ಇರುವ ಕಾರಣ ರಕ್ಷಿತ್ ರವರ ಮದುವೆಗೆ ಬಂದಿರಲಿಲ್ಲ ಎಂದರೆ ಸರಿ. ರಕ್ಷಿತ್ ರವರ ಮದುವೆ ಶಿವಮೊಗ್ಗದ ಸರ್ಜಿ ಕಲ್ಯಾಣ ಮಂಟಪದಲ್ಲಿ ಜರುಗಿತ್ತು ಎಂದರೆ ಸರಿ. ನನ್ನ ತಾಯಿ ವಿದ್ಯಾಭ್ಯಾಸ ಮಾಡಿಲ್ಲ. ಮೊದಲು ನನ್ನ ತಾಯಿ ಸಹಿ ಮಾಡುತ್ತಿದ್ದರು ಈಗ ಹೆಬ್ಬಟ್ಟಿನ ಸಹಿ ಮಾಡುತ್ತಾರೆ. ನನ್ನ ತಾಯಿಗೆ ಅನಾರೋಗ್ಯ ಉಂಟಾದಾಗಿನಿಂದ ಹೆಬ್ಬಟ್ಟಿನ ಸಹಿ ಮಾಡುತ್ತಿದ್ದಾರೆ. ನನ್ನ ತಾಯಿಗೆ ನರದೌರ್ಬಲ್ಯದ ಬಗ್ಗೆ ಚಿಕಿತ್ಸೆ ಕೊಡಿಸಿದ ದಾಖಲೆ ಮತ್ತು ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಕೊಡಿಸಿದ ಬಗ್ಗೆ ದಾಖಲೆಗಳು ಇರುತ್ತವೆ. ನಿಪಿ.1 ನ್ನು ಮಾಡಿಸುವ ಸಮಯದಲ್ಲಿ ನೋಟರಿಯವರ ಬಳಿ ವೈದ್ಯಕೀಯ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೀರಾ ಎಂದರೆ ಸಾಕ್ಷಿಯು ಅವರೇ ಬಂದಿದ್ದರು ಎಂದು ನುಡಿಯುತ್ತಾರೆ. ನೋಟರಿಯವರು ನಮ್ಮ ಮನೆಗೆ ಬಂದಿದ್ದರು

ಎಂದು ನಿಪಿ.1 ರಲ್ಲಾಗಲೀ ಅಥವಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ ಎಂದರೆ ಸರಿ.

ನನ್ನ ತಾಯಿಯವರು ವೀರಭದ್ರಪ್ಪರವರ ಜೀವಿತ ಕಾಲದಲ್ಲಿ ಅನ್ಯೋನ್ಯವಾಗಿದ್ದರು ಎಂದರೆ ಸರಿ. ನನ್ನ ತಾಯಿಯ ತಂದೆ ಯಾವಾಗ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಾನು ಅವರನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯ ತಂದೆ 1979-80 ಕ್ಕಿಂತ ಮೊದಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಶಿವಬಸಪ್ಪರವರು ಮರಣ ಹೊಂದಿದ ನಂತರ ದಾವಾ ಅನುಸೂಚಿ 1 ಮತ್ತು 2 ನೇ ಆಸ್ತಿಗಳು ವೀರಭದ್ರಪ್ಪರವರ ಹೆಸರಿಗೆ ಐಎಚ್ ನಂ. 1/1979-80 ರಂತೆ ಖಾತೆ ಆಗಿರುತ್ತದೆ ಎಂದರೆ ಸರಿ. ವೀರಭದ್ರಪ್ಪರವರು ಮರಣ ಹೊಂದಿದ ನಂತರ ಸದರಿ ಆಸ್ತಿಗಳು ಎಂ ಆರ್ ನಂ. 41/2022-23 ರಂತೆ ಪೌತಿ ಖಾತೆಯಾಗಿರುತ್ತದೆ ಎಂದರೆ ಸರಿ. ಅದೇ ರೀತಿ ದಾವಾ ಅನುಸೂಚಿ 6 ಆಸ್ತಿಯು ಸಹ ಶಿವಬಸಪ್ಪರವರು ಪೌತಿ ಆದ ನಂತರ ವೀರಭದ್ರಪ್ಪರವರ ಹೆಸರಿಗೆ ಎಂ ಆರ್ ನಂ. 11/1989-90 ರಂತೆ ಖಾತೆಯಾಗಿರುತ್ತದೆ ಎಂದರೆ ಸರಿ. ನನ್ನ ತಾಯಿಗೆ ವೀರಪ್ಪ ಎನ್ನುವ ಒಬ್ಬ ತಮ್ಮ ಇದ್ದರು ಎಂದರೆ ಸರಿ. ವೀರಪ್ಪರವರನ್ನು ನಾನು ನೋಡಿದ್ದೆ ಅವರು ಅಂದಾಜು 10-15 ವರ್ಷಗಳ ಹಿಂದೆ ಮರಣ ಹೊಂದಿರಬಹುದು. ವೀರಪ್ಪರವರು ಅವಿವಾಹಿತರಾಗಿದ್ದರು. ವೀರಪ್ಪರವರಿಗೆ ಹೃದಯ ಶಸ್ತ್ರ ಚಿಕಿತ್ಸೆ ಆಗಿದ್ದರಿಂದ ಅವರು ವಿವಾಹ ಆಗಿರಲಿಲ್ಲ. ಶಿವಬಸಪ್ಪ ಮತ್ತು ಶಿವಬಸಮ್ಮನಿಗೆ ಉಳಿದದ್ದು ವೀರಭದ್ರಪ್ಪ ಒಬ್ಬರೇ ಗಂಡು ಮಗ ಎಂದರೆ ಸರಿ. ಶಿವಬಸಪ್ಪರವರು ಮರಣ ಹೊಂದಿದ ನಂತರ ವೀರಭದ್ರಪ್ಪರವರ ಹೆಸರಿಗೆ ದಾವಾ ಅನುಸೂಚಿ 1, 2 ಮತ್ತು 6 ನೇ ಆಸ್ತಿಗಳು ಪೌತಿ ಖಾತೆ ಆಗುವಾಗ ನನ್ನ ತಾಯಿಯಾಗಲೀ ಅಥವಾ ಗೌರಮ್ಮರಾಗಲೀ ಯಾವುದೇ ತಕರಾರು ಮಾಡಿರಲಿಲ್ಲ ಎಂದರೆ ಸರಿ. ಸದರಿ 3 ಆಸ್ತಿಗಳಿಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಸಾಲ ತೆಗೆಯುವ ಮತ್ತು ಆ ಜಮೀನುಗಳಿಗೆ ಸಂಬಂಧಿಸಿದಂತೆ ವ್ಯವಹಾರವನ್ನು ಕೇವಲ ವೀರಭದ್ರಪ್ಪರವರು ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿಗೆ 80 ವರ್ಷ ಎಂದರೆ ಸಾಕ್ಷಿಯು 70 ವರ್ಷ ಇರಬಹುದು ಎಂದು ನುಡಿಯುತ್ತಾರೆ. ನಿಪಿ.1 ನ್ನು ಬರೆಸುವಾಗ ನನ್ನ ತಾಯಿಗೆ ಎಷ್ಟು ವಯಸ್ಸು ಆಗಿರುತ್ತದೆ ಎಂದು ಬರೆಸಿದ್ದೆವು ಎಂದು ನೆನಪಿಲ್ಲ. ನನ್ನ ತಾಯಿ 20-21 ವಯಸ್ಸಿನಲ್ಲಿ ಮದುವೆ ಆಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಎಷ್ಟನೇ ವಯಸ್ಸಿನಲ್ಲಿ ಮದುವೆಯಾಗಿತ್ತು ಎಂದು ನಾನು ಅವರನ್ನು ವಿಚಾರಿಸಿಲ್ಲ.

ದಾವಾ ಅನುಸೂಚಿ 3 ರತ್ನಮ್ಮ ಕೋಂ ಚಂದ್ರಪ್ಪರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ರತ್ನಮ್ಮರವರು ನನ್ನ ದೊಡ್ಡಮ್ಮ ಗೌರಮ್ಮರವರ ಸೊಸೆ ಎಂದರೆ ಸರಿ. ಸದರಿ ಆಸ್ತಿಯು ರತ್ನಮ್ಮನಿಗೆ ಯಾರ ಪೌತಿ ನಂತರ ಖಾತೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಯಾವಾಗ ಖರೀದಿ ಮಾಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ರತ್ನಮ್ಮನಿಗೆ ಸದರಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ನಾನು ದಾಖಲೆ ತೆಗೆಸಿ ನೋಡಿಲ್ಲ. ಸದರಿ ಆಸ್ತಿಯು ವೀರಭದ್ರಪ್ಪ ಅಥವಾ ಅವರ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಖಾತೆ ಮೊದಲು ಸಿದ್ದಪ್ಪ ಬಿನ್ ಹಾಲಪ್ಪ ಎನ್ನುವವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸಿದ್ದಪ್ಪರವರು

ನನ್ನ ದೊಡ್ಡಮ್ಮ ಗೌರಮ್ಮರವರ ಗಂಡ ಎಂದರೆ ಸರಿ. ಸದರಿ ಆಸ್ತಿಯು ವೀರಭದ್ರಪ್ಪರವರಿಗಾಗಲೀ ಅಥವಾ ಅವರ ಕುಟುಂಬಕ್ಕಾಗಲೀ ಸಂಬಂಧ ಇಲ್ಲದೇ ಇದ್ದರು ಸಹ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ಶಿವಬಸಪ್ಪರವರು ಸಿದ್ದಪ್ಪನಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ 4 ಆಸ್ತಿಗೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ತೆಗೆಸಿ ನೋಡಿಲ್ಲ. ಸದರಿ ಆಸ್ತಿಯು ನನ್ನ ದೊಡ್ಡಮ್ಮ ಗೌರಮ್ಮನ ಗಂಡನ ಕುಟುಂಬಕ್ಕೆ ಸಂಬಂದಿಸಿದ ಆಸ್ತಿ ಎಂದರೆ ಸರಿ. ದಾವಾ ಅನುಸೂಚಿ 3 ಮತ್ತು 4 ಆಸ್ತಿಗಳನ್ನು ಸಿದ್ದಪ್ಪನ ಕುಟುಂಬದವರೇ ಅನುಬೋಗ ಮಾಡುತ್ತಿದ್ದಾರೆ. ಸಾಕ್ಷಿ ಮುಂದುವರೆದು ಮೊದಲು ಒಟ್ಟು ಕುಟುಂಬದಲ್ಲಿಯೇ ಅನುಬೋಗ ಮಾಡುತ್ತಿದ್ದು ಈಗ 3 ವರ್ಷಗಳಿಂದ ಅವರು ಅನುಬೋಗ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸಿದ್ದಪ್ಪನ ಕುಟುಂಬವೇ ಬೇರೆ ಮತ್ತು ವೀರಭದ್ರಪ್ಪನ ಕುಟುಂಬವೇ ಬೇರೆ ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ಸಿದ್ದಪ್ಪರವರು ಯಾವತ್ತು ಒಟ್ಟು ಕುಟುಂಬದಲ್ಲಿ ಇರದೇ ಇದ್ದರು ಒಟ್ಟು ಕುಟುಂಬದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವೀರಭದ್ರಪ್ಪರವರು ಕೇವಲ 6 ನೇ ತರಗತಿ ಓದಿರುತ್ತಾರೆ ಎಂದರೆ ಸರಿ. ಅವರಿಗೆ ವ್ಯವಹಾರ ಜ್ಞಾನ ಚೆನ್ನಾಗಿ ಇತ್ತು ಎಂದರೆ ಸರಿ. ವೀರಭದ್ರಪ್ಪರವರು ಹೈನುಗಾರಿಕೆಯನ್ನು ಚೆನ್ನಾಗಿ ಮಾಡುತ್ತಿದ್ದರು ಎಂದರೆ ಸರಿ. ಅವರು ಹೈನುಗಾರಿಕೆ ಜೊತೆ ವೀಳ್ಯದೆಲೆ ಮತ್ತು ಮೆಕ್ಕೆಜೋಳ ವ್ಯಾಪಾರ ಸಹ ಮಾಡುತ್ತಿದ್ದರು ಎಂದರೆ ಸರಿ. ಅವರ ಆದಾಯದಿಂದ ದಾವಾ ಅನುಸೂಚಿ 5 ನ್ನು ಸ್ವಯಾರ್ಜಿತವಾಗಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿ 7 ಆಸ್ತಿಯು ವೀರಭದ್ರಪ್ಪರವರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ವೀರಭದ್ರಪ್ಪರವರು ಮೃತ ಹೊಂದುವ ಪೂರ್ವದಲ್ಲಿ ಅವರ ಹೆಸರಿನಲ್ಲಿ ಇರುವ ದಾಖಲೆಯನ್ನು ನಾನು ನೋಡಿಲ್ಲ. ಸ.ನಂ. 35/2 ರಲ್ಲಿ 2 ಎಕರೆ 35 ಗುಂಟೆ ಗೌರಮ್ಮ ಕೋಂ ಸಿದ್ದರಾಮಪ್ಪ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಗೌರಮ್ಮ ಕೋಂ ಸಿದ್ದಪ್ಪ ಎಂದು ಆಗುವ ಬದಲು ಸಿದ್ದರಾಮಪ್ಪ ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ 6 ನೇ ಪ್ರತಿವಾದಿಗೆ ತಲಾ 35 ಗುಂಟೆಯಂತೆ ಎರಡು ಭಾಗ ಇರುತ್ತದೆ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಗೆ 1 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಅದೇ ರೀತಿ 5 ನೇ ಪ್ರತಿವಾದಿಗೆ 1 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗೆ ಸಂಬಂದಿಸಿದಂತೆ ಈಗ ಹೇಳಿದವರ ಹೆಸರಿಗೆ ಹೇಗೆ ಖಾತೆ ಆಯಿತು ಎಂದು ನಾನು ದಾಖಲೆಗಳನ್ನು ನೋಡಿಲ್ಲ. ದಾವಾ ಅನುಸೂಚಿ 7 ಆಸ್ತಿಯು ಮೊದಲು ವೀರಭದ್ರಪ್ಪರವರ ಹೆಸರಿನಲ್ಲಾಗಲೀ ಅಥವಾ ಶಿವಬಸಪ್ಪರವರ ಹೆಸರಿನಲ್ಲಾಗಲೀ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ 7 ರಲ್ಲಿ ಮೇಲೆ ಹೇಳಿದವರ ಯಾರ ಯಾರ ಹೆಸರಿನಲ್ಲಿ ಆಸ್ತಿ ಇರುತ್ತದೆಯೋ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು ವೀರಭದ್ರಪ್ಪ ಅಥವಾ ಅವರ ತಂದೆ ಶಿವಬಸಪ್ಪರವರ ಹೆಸರಿನಲ್ಲಿ ಇರದೇ ಇದ್ದರು ಸಹ ಈ ದಾವೆಯಲ್ಲಿ ಅದನ್ನು ದುರುದ್ದೇಶಪೂರ್ವಕವಾಗಿ ಸೇರಿಸಿದ್ದೇವೆ ಎಂದರೆ

ಸರಿಯಲ್ಲ. ನಿಪಿ.9 ದಾಖಲೆಯು ನನ್ನ ತಾಯಿಯವರ ಬಳಿಯೇ ಇತ್ತು. ಸದರಿ ದಾಖಲೆ ಯಾವ ಸರ್ವೆ ನಂಬರ್ ಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ನಿಪಿ.9 ದಾಖಲೆಯು ಜಯಮ್ಮರವರ ಹೆಸರಿನಲ್ಲಿ ಆಗಬೇಕಾಗಿತ್ತು ಆದರೆ ಈಗ ಸುಲೋಚನಮ್ಮರವರ ಹೆಸರಿಗೆ ಆಗಿರುತ್ತದೆ. ನನ್ನ ತಾಯಿಯವರ ಹೆಸರಿಗೆ ಆಗಬೇಕಾಗಿದ್ದು ಸುಲೋಚನಮ್ಮರವರ ಹೆಸರಿಗೆ ಆಗಿರುತ್ತದೆ ಎನ್ನುವ ವಿಷಯವನ್ನು ನಮ್ಮ ವಕೀಲರಿಗೆ ತಿಳಿಸಿದ್ದೆ. ನಿಪಿ.9 ರಲ್ಲಿರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಬಿ ಷೆಡ್ಯೂಲ್ ಆಸ್ತಿಯು 6 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ.9 ದಾಖಲೆಯೇ ಸದರಿ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಬಿ ಷೆಡ್ಯೂಲ್ ಆಸ್ತಿಯು 6 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ತಾಯಿಯು ಯಾವತ್ತು ತನ್ನ ತವರುಮನೆಯ ಆಸ್ತಿಯನ್ನು ತೆಗೆದುಕೊಳ್ಳಬೇಕು ಎನ್ನುವ ಇಚ್ಚೆ ಹೊಂದಿರಲಿಲ್ಲ ಎಂದರೆ ಸಾಕ್ಷಿಯು ಮೊದಲು ಹೊಂದಿರಲಿಲ್ಲ ಈಗ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ನನಗೆ ನಿಪಿ.1 ನ್ನು ತಮ್ಮ ಸ್ವ ಇಚ್ಚೆಯಿಂದ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈ ದಾವೆಯನ್ನು ಹಾಕಿರುವ ಬಗ್ಗೆ ಸಂಪೂರ್ಣ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಮಾತನಾಡುವ ಸಾಮರ್ಥ್ಯ, ದಾವೆಯನ್ನು ಹಾಕಿ ತನ್ನ ಹಕ್ಕನ್ನು ಪಡೆಯಬೇಕು ಎನ್ನುವ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಾಯಿಯ ಅನಾರೋಗ್ಯವನ್ನು ದುರುಪಯೋಗ ಮಾಡಿಕೊಂಡು ನಾನು ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಯಾವತ್ತು ಪ್ರತಿವಾದಿಯರಿಗೆ ತನಗೆ ಆಸ್ತಿಯಲ್ಲಿ ಪಾಲು ಬೇಕು ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಒಂದು ವೇಳೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿದ್ದರೆ ಅವರು ಈ ದಾವೆಯನ್ನು ದಾಖಲಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ಅನಾರೋಗ್ಯ ಉಂಟಾದಾಗ ಪ್ರತಿವಾದಿಯರು ನಮ್ಮ ಮನೆಗೆ ಬಂದು ನನ್ನ ತಾಯಿಯನ್ನು ನೋಡಿಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಶ್ರೀನಿವಾಸರವರು ಮೊದಲು ಭದ್ರಾವತಿಯ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತಿದ್ದರು ಎಂದರೆ ಸರಿ. ನನ್ನ ಅಣ್ಣ ಮರಣ ಹೊಂದಿದ ನಂತರ ಅವರು ಕೆಲಸ ಮಾಡುತ್ತಿದ್ದ ಪ್ಯಾಕ್ಟರಿಯಿಂದ ಹಲವಾರು ಸವಲತ್ತುಗಳು ಬಂದಿರುವ ವಿಷಯ ನನಗೆ ಗೊತ್ತಿಲ್ಲ. ಶ್ರೀನಿವಾಸನಿಗೂ ಮತ್ತು ಅವರ ಹೆಂಡತಿ 8 ನೇ ಪ್ರತಿವಾದಿಗೂ ವಿಚ್ಚೇದನ ಆಗಿರಲಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಂದೆ ಕೂಡಿಕೊಂಡು ನನ್ನ ಅಣ್ಣ ಶ್ರೀನಿವಾಸ ಮತ್ತು ಅವರ ಹೆಂಡತಿ 8 ನೇ ಪ್ರತಿವಾದಿ ನೀಲಮ್ಮರವರಿಗೂ ವಿಚ್ಚೇದನ ಆಗಿರುತ್ತದೆ ಎಂದು ಹೇಳಿ ಶ್ರೀನಿವಾಸರವರಿಗೆ ಬಂದಿರುವ ಸವಲತ್ತುಗಳನ್ನು ನಾವೇ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ನನ್ನ ಅಣ್ಣನ ಸವಲತ್ತುಗಳನ್ನು ಪಡೆದುಕೊಂಡಿರುವುದರಿಂದ ನಮ್ಮ ಮೇಲೆ ಕೇಸು ಹಾಕಬಹುದು ಎನ್ನುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಕೆ ಜಿ ಚಂದ್ರಶೇಖರಪ್ಪ ಎನ್ನುವವರು ನನ್ನ ತಂದೆ ಎಂದರೆ ಸರಿ. ನನ್ನ ತಂದೆಗೆ ಸಂಬಂಧಿಸಿದಂತೆ ಕೋಗಲೂರು ಗ್ರಾಮದಲ್ಲಿ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ನನ್ನ ತಂದೆಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಆಸ್ತಿಯಲ್ಲಿ 8ನೇ ಪ್ರತಿವಾದಿಗೆ ಪಾಲು ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದಲೂ ಸಹ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ವಿಚಾರಣೆಯಲ್ಲಿ

ನಾನು ಖುದ್ದಾಗಿ ಬಿಲ್ಲಹಳ್ಳಿ ಗ್ರಾಮಕ್ಕೆ ಹೋಗಿ ಪಾಲು ಕೊಡುವಂತೆ ಕೇಳಿದ್ದೆ ಎಂದು ಹೇಳಿರುವುದು ಸುಳ್ಳು ಇರುತ್ತದೆ ಎಂದರೆ ಸಾಕ್ಷಿಯು ನಾನು ಆಸ್ತಿ ಕೊಡುವಂತೆ ಕೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಮರ್ಥರು ಇಲ್ಲದೇ ಇರುವ ಕಾರಣದಿಂದ ಅವರನ್ನು ನ್ಯಾಯಾಲಯದ ಮುಂದೆ ತರದೇ ಮತ್ತು ಅವರಿಗೆ ಸಂಬಂಧಿಸಿದಂತೆ ಯಾವುದೇ ವೈದ್ಯಕೀಯ ದಾಖಲೆ ಹಾಜರುಪಡಿಸದೇ ನಾನು ಅವರ ಪರವಾಗಿ ಈ ದಾವೆಯನ್ನು ಪ್ರತಿನಿಧಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**OS.No.**15/2025
**<u>ಪಿ ಡಬ್ಲ್ಯೂ: 1</u>**

**ಮರು ವಿಚಾರಣೆ:ಇಲ್ಲ**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.